**4001/5048/6016/7016**

## I Semester 3 Year LL.B./III Semester 5 Year B.A. LL.B. (Maj.-Min. System)/ B.B.A. LL.B./B.Com. LL.B. Examination, October/November 2021

## CONSTITUTIONAL LAW – I

Duration : 3 Hours Max. Marks : 80

**Instructions : 1. Answer any five questions from group (a) each question carries 10 marks.**

**2. Answer any five questions from group (b) each question carries 6 marks.**

**3. Answer should be written either in English or Kannada completely.**

Q. No. 1. a) Explain the salient features of Indian Constitution. Marks : 10

ಭಾರತ ಸಂವಿಧಾನದ ಪ್ರಮುಖ ಲಕ್ಷಣಗಳನ್ನು ವಿವರಿಸಿರಿ.

Q. No. 1. b) Preamble. Marks : 6

ಪ್ರಸ್ತಾವನೆ.

Q. No. 2. a) Critically examine the federal characters of the Indian Constitution. Marks : 10

ಭಾರತ ಸಂವಿಧಾನದ ಸಂಯುಕ್ತತೆಯ ಲಕ್ಷಣಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ.

Q. No. 2. b) Kinds of Constitution. Marks : 6

ಸಂವಿಧಾನದ ವಿವಿಧ ಪ್ರಕಾರಗಳು.

Q. No. 3. a) Does Article 14 permit classification ? If so, discuss the basis of classification. Marks : 10

ಅನುಚ್ಛೇದ 14 ವರ್ಗೀಕರಣಕ್ಕೆ ಅವಕಾಶ ಕೊಡುತ್ತದೆಯೇ ? ಹಾಗಿದ್ದಲ್ಲಿ ಯಾವ ಆಧಾರಗಳ ಮೇಲೆ ಎಂಬುದನ್ನು ಚರ್ಚಿಸಿರಿ.

Q. No. 3. b) Write a note on 'Doctrine of Severability'. Marks : 6

'ಬೇರ್ಪಡಿಸುವ ಸಿದ್ಧಾಂತ'ದ ಬಗ್ಗೆ ಟಿಪ್ಪಣಿ ಬರೆಯಿರಿ.

P.T.O.

Q. No. 4. a) Examine the scope of "Other authorities" under Article 12 of the Constitution. Marks : 10

ಸಂವಿಧಾನದ ಅನುಚ್ಛೇದ 12ರಲ್ಲಿನ ''ಇತರ ಪ್ರಾಧಿಕಾರಗಳು'' ಎಂಬುದರ ವ್ಯಾಪ್ತಿಯನ್ನು ಪರಿಶೀಲಿಸಿ.

Q. No. 4. b) Is University a "State" under Article 12 ? Marks : 6

ಅನುಚ್ಛೇದ 12ರ ಅಡಿ ವಿಶ್ವವಿದ್ಯಾಲಯ ರಾಜ್ಯವೇ ?

Q. No. 5. a) "Article 15(4) provides for the advancement of socially and educationally backward classes of citizens." Discuss with cases. Marks : 10

''ಅನುಚ್ಛೇದ 15(4) ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಪೌರ ವರ್ಗಗಳ ಅಭಿವೃದ್ಧಿಗಾಗಿ ಅವಕಾಶ ಮಾಡಿಕೊಡುತ್ತದೆ.'' ತೀರ್ಮಾನಿತ ಪ್ರಕರಣಗಳೊಂದಿಗೆ ಈ ಹೇಳಿಕೆಯನ್ನು ಚರ್ಚಿಸಿ.

Q. No. 5. b) A non-resident of Karnataka complains that he has to pay a greater capitation fee for admission to medical college in Karnataka. Is this complain justified ? Marks : 6

ಕರ್ನಾಟಕ ಅನಿವಾಸಿಯು ಕರ್ನಾಟಕದ ವೈದ್ಯಕೀಯ ಕಾಲೇಜಿನಲ್ಲಿ ಪ್ರವೇಶ ಪಡೆಯಲು ಹೆಚ್ಚಿನ ಕ್ಯಾಪಿಟೇಶನ್ ಶುಲ್ಕ ನೀಡಬೇಕೆಂದು ದೂರುತ್ತಿದ್ದಾನೆ. ಈ ದೂರು ನ್ಯಾಯಬದ್ಧವೇ ?

Q. No. 6. a) Discuss the right to freedom of profession, occupation, trade or business under Article 19(1)(g) of Indian Constitution. Marks : 10

ಭಾರತದ ಸಂವಿಧಾನದ ಅನುಚ್ಛೇದ 19(1)(g)ಯ ಪ್ರಕಾರ ವೃತ್ತಿ, ಉದ್ಯೋಗ, ವ್ಯಾಪಾರ ಅಥವಾ ವ್ಯವಹಾರಕ್ಕೆ ಸಂಬಂಧಿಸಿದ ಸ್ವಾತಂತ್ರ್ಯದ ಹಕ್ಕಿನ ಬಗ್ಗೆ ವಿವರಿಸಿರಿ.

Q. No. 6. b) Write a note on untouchability. Marks : 6

ಅಸ್ಪೃಶ್ಯತೆ ಬಗ್ಗೆ ಟಿಪ್ಪಣಿ ಬರೆಯಿರಿ.

Q. No. 7. a) Explain the safeguards available against the arbitrary arrest and detention. Marks : 10

ಸ್ವೇಚ್ಛಾನುಸಾರ ದಸ್ತಗಿರಿ ಮತ್ತು ಬಂಧನದ ವಿರುದ್ಧ ಇರುವ ರಕ್ಷಣೆಗಳನ್ನು ವಿವರಿಸಿರಿ.

Q. No. 7. b) Authorities have refused to issue passport to 'A', a citizen of India to go abroad. Can the authorities be compelled to issue ? Marks : 6

ಪ್ರಾಧಿಕಾರವು 'ಎ' ಎಂಬ ಭಾರತೀಯ ನಾಗರಿಕನಿಗೆ ವಿದೇಶ ಪ್ರವಾಸ ಪತ್ರವನ್ನು ಕೊಡಲು ನಿರಾಕರಿಸಿದೆ. ಪ್ರಾಧಿಕಾರವು ಈ ಪತ್ರವನ್ನು ನೀಡಲೇಬೇಕೆಂದು ಒತ್ತಾಯಿಸಬಹುದೇ ?

Q. No. 8. a) Briefly explain the right to freedom of religion under Indian Constitution. Marks : 10

ಭಾರತದ ಸಂವಿಧಾನದಲ್ಲಿ ಇರುವ ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ಸಂಕ್ಷಿಪ್ತವಾಗಿ ವಿವರಿಸಿ.

Q. No. 8. b) An accused was compelled by police authorities to accept that he committed an offence under a law. Does it amount to violation of his fundamental right ? Decide. Marks : 6

ಒಬ್ಬ ಆರೋಪಿಯನ್ನು ಕಾನೂನಿನ ಅಡಿಯಲ್ಲಿ ಅಪರಾಧ ಮಾಡಿರುವುದನ್ನು ಒಪ್ಪಿಕೊಳ್ಳಲು ಪೋಲೀಸ್ ಅಧಿಕಾರಿಗಳು ಒತ್ತಡ ಹೇರುತ್ತಾರೆ. ಇದು ಅವನ ಮೂಲಭೂತ ಹಕ್ಕಿನ ಉಲ್ಲಂಘನೆಯೇ ? ನಿರ್ಧರಿಸಿರಿ.

Q. No. 9. a) State the nature and scope of rights of minorities to establish and administer educational institutions. Marks : 10

ಅಲ್ಪಸಂಖ್ಯಾತರಿಗೆ ಲಭ್ಯವಿರುವ ಶಿಕ್ಷಣ ಸಂಸ್ಥೆಗಳ ಸ್ಥಾಪನೆ ಹಾಗೂ ನಿರ್ವಹಣೆಯ ಹಕ್ಕಿನ ಸ್ವರೂಪ ಹಾಗೂ ವ್ಯಾಪ್ತಿಯನ್ನು ಹೇಳಿರಿ.

Q. No. 9. b) Write a note on writ of Mandamus. Marks : 6

ಮ್ಯಾಂಡಮಸ್ ರಿಟ್ ಕುರಿತು ಟಿಪ್ಪಣಿ ಬರೆಯಿರಿ.

Q. No. 10. a) Discuss the importance of Directive Principles of State Policy. Explain its relation to Fundamental Rights. Marks : 10

ರಾಜ್ಯ ನೀತಿಯ ನಿರ್ದೇಶನಾತ್ಮಕ ತತ್ವಗಳ ಮಹತ್ವವನ್ನು ಚರ್ಚಿಸಿರಿ. ಮೂಲಭೂತ ಹಕ್ಕುಗಳೊಂದಿಗೆ ಇರುವ ಇವುಗಳ ಸಂಬಂಧವನ್ನು ವಿವರಿಸಿ.

Q. No. 10. b) The Government of Karnataka acquired the land of 'B' by law. 'B' wants to challenge the acquisition of property by way of writ under Article 32 of the Indian Constitution. Can 'B' succeed ? Marks : 6

ಕರ್ನಾಟಕ ಸರಕಾರವು ಸೂಕ್ತ ಕಾನೂನಿನ ಮೂಲಕ 'B'ಯ ಭೂಮಿಯನ್ನು ಭೂಸ್ವಾಧೀನ ಮಾಡಿಕೊಳ್ಳುತ್ತದೆ. 'B'ಯು ಭಾರತದ ಸಂವಿಧಾನದ ಅನುಚ್ಛೇದ 32 ರಲ್ಲಿ ರಿಟ್ ಮೂಲಕ ಭೂಸ್ವಾಧೀನವನ್ನು ಪ್ರಶ್ನಿಸಲು ಇಚ್ಛಿಸುತ್ತಾನೆ. 'B'ಯು ಗೆಲ್ಲುವನೇ ?

---